ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂಖ್ಯೆ ಃಸಾಮಾನ್ಯ /ಮಾಹ/ಆದೇಶ/2013-14

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು -1
ದಿನಾಂಕ ಃ 19-03-2016.

ವಿಷಯಃ- ಮಾಹಿತಿ ಹಕ್ಕು ಅಧಿನಿಯಮದಡಿ 2005 ರಡಿ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರಗಳನ್ನು ನೇಮಿಸುವ ಬಗ್ಗೆ.

ಉಲ್ಲೇಖಃ
1. ಭಾರತ ಸರ್ಕಾರದ ಮಾಹಿತಿ ಹಕ್ಕು ಅಧಿನಿಯಮ 2005
2. ಸರ್ಕಾರದ ಆದೇಶ ಸಂ ಃ ಕೃತೋಇ/59/ಕೃತೋಸ/2005,ಬೆಂಗಳೂರು ದಿನಾಂಕ: 8-9-2005
3. ಇದೇ ಸಮ ಸಂಖ್ಯೆಯ ಆದೇಶ ದಿನಾಂಕ 17-9-2005,7-9-2006, 23-6-2011, 26-09-2013, 14-02-2014 ಮತ್ತು 09-12-2014

*****

## -: ತಿದ್ದುಪಡಿ :-

ಉಲ್ಲೇಖ(1)ರ ಮಾಹಿತಿ ಹಕ್ಕು ಅಧಿನಿಯಮದ 2005 (2005 ರ ಕೇಂದ್ರ ಕಾಯಿದೆ ಸಂ.22) ಜಾರಿಯಲ್ಲಿ ಬಂದಿದ್ದು, ಅಧಿನಿಯಮ ಕಂಡಿಕೆ 5 (1) 5 (2) & 19 (1) ರನ್ವಯ ಕೃಷಿ ಇಲಾಖೆಯಲ್ಲಿ ಉಲ್ಲೇಖಿತ -3 ಆದೇಶಗಳನ್ವಯ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ಮತ್ತು ಮೇಲ್ಮನವಿ ಪ್ರಾಧಿಕಾರಿಗಳನ್ನು ನೇಮಕ ಮಾಡಿ ಈ ಆದೇಶವನ್ನು ಅಲ್ಪ ಬದಲಾವಣೆಗಳೊಂದಿಗೆ ಉಲ್ಲೇಖ (3) ರಲ್ಲಿ ಪರಿಷ್ಕರಿಸಿ ಆದೇಶಿಸಲಾಗಿತ್ತು.

ಕೃಷಿ ಆಯುಕ್ತಾಲಯದಲ್ಲಿ ಅನೇಕ ವಿಭಾಗಗಳಿದ್ದು, ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕೃತವಾಗಿರುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ತ್ವರಿತವಾಗಿ ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡುವ ದೃಷ್ಟಿಯಿಂದ ಇದೇ ಸಮಸಂಖ್ಯೆ ದಿನಾಂಕ 9-12-2014 ರ ಆದೇಶದಲ್ಲಿನ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ, ಮೇಲ್ಮನವಿ ಪ್ರಾಧಿಕಾರಿಗಳನ್ನು ಕೆಳಕಂಡಂತೆ ಮಾರ್ಪಡಿಸಿ ಆದೇಶಿಸಿದೆ. ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

| ಕ ಸಂ | ಸಾರ್ವಜನಿಕ ಪ್ರಾಧಿಕಾರದ ಹೆಸರು | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಸಾರ್ವಜನಿಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾಧಿಕಾರಿ |
|---|---|---|---|---|
| 1 | ಕೃಷಿ ಆಯುಕ್ತರು ಕೃಷಿ ಇಲಾಖೆ ಶೇಷಾದಿ ರಸ್ತೆ ಬೆಂಗಳೂರು | (1)ಎಲ್ಲಾ ಉಪ ಕೃಷಿ ನಿರ್ದೇಶಕರು (ಅವರ ಅಧೀನ ವಿಷಯಗಳಬಗ್ಗೆ) ಕೇಂದ್ರಕಚೇರಿ, ಶೇಷಾದ್ರಿ ರಸ್ತೆ , ಬೆಂಗಳೂರು | ಸಂಬಂಧಪಟ್ಟ ಎಲ್ಲಾ ಜಂಟಿ ಕೃಷಿ ನಿರ್ದೇಶಕರು, ಕೇಂದ್ರ ಕಚೇರಿ, ಶೇಷಾದ್ರಿ ರಸ್ತೆ, ಬೆಂಗಳೂರು | ಅಪರ ಕೃಷಿ ನಿರ್ದೇಶಕರು (ಮಾನವ ಸಂಪನ್ಮೂಲ ಅಭಿವೃದ್ಧಿ) ಕೇಂದ್ರ ಕಚೇರಿ, ಶೇಷಾದ್ರಿ ರಸ್ತೆ, ಬೆಂಗಳೂರು |
| | | (2) ಆಡಳಿತಾಧಿಕಾರಿಗಳು, (ಸಾಮಾನ್ಯ & ವಿಚಾರಣಾ ಶಾಖೆ) ಕೇಂದ್ರ ಕಚೇರಿ, ಶೇಷಾದಿ ರಸ್ತೆ, ಬೆಂಗಳೂರು | ಜಂಟಿ ನಿರ್ದೇಶಕರು (ಆಡಳಿತ) ಕೃಷಿ ಇಲಾಖೆ ಶೇಷಾದ್ರಿ ರಸ್ತೆ ಬೆಂಗಳೂರು | |

ಸಹಿ:
ಕೃಷಿ ಆಯುಕ್ತರು

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1.
2. ಕರ್ನಾಟಕ ಮಾಹಿತಿ ~~[illegible]~~ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಗೇಟ್-ನಂ-1, 3ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1.

d:\mahitihakku\office order.doc

2. ಸರ್ಕಾರದ ಪ್ರಧಾನ ಕಾರ್ಯದರ್ಶಿ, (ಸಿಆಸುಇ) ಜನಸ್ಪಂದನ ಕೋಶ, 20ನೇ ಮಹಡಿ, ವಿ.ವಿ.ಗೋಪುರ, ಬೆಂಗಳೂರು-1.
3. ಅಪರ ಕೃಷಿ ನಿರ್ದೇಶಕರು,(ಮಾನವ ಸಂಪನ್ಮೂಲ ಅಭಿವೃದ್ಧಿ/ಸಾವಯವ ಕೃಷಿ/ಬೆಳೆ ಅಭಿವೃದ್ಧಿ ಮತ್ತು ಯೋಜನೆ), ಕೃಷಿ ಆಯುಕ್ತಾಲಯ ,ಬೆಂಗಳೂರು ಇವರ ಮಾಹಿತಿಗಾಗಿ.
4. ಜಂಟಿ ಕೃಷಿ ನಿರ್ದೇಶಕರು (ಪರಿಕರ/ಅಭಿವೃದ್ಧಿ/ವಿಸ್ತರಣೆ ಮತ್ತು ತರಬೇತಿ)ಕೃಷಿ ಆಯುಕ್ತಾಲಯ ,ಬೆಂಗಳೂರು ಇವರ ಮಾಹಿತಿಗಾಗಿ.
5. ಕೃಷಿ ನಿರ್ದೇಶನಾಲಯದ ಎಲ್ಲಾ ಉಪ / ಸಹಾಯಕ ಕೃಷಿ ನಿರ್ದೇಶಕರು ಹಾಗೂ ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ ಮಾಹಿತಿಗಾಗಿ.
6. ಕೃಷಿ ಆಯುಕ್ತರು/ಕೃಷಿ ನಿರ್ದೇಶಕರ ಆಪ್ತ ವಿಭಾಗಗಳಿಗೆ
7. ಕಛೇರಿ ಆದೇಶದ ಕಡತಕ್ಕೆ

22/03

ಕೃಷಿ ಆಯುಕ್ತರ ಪರವಾಗಿ.

d:\mahitihakku\office order.doc